> ಅಪ್ಪನ ಜೊತೆ ತಿರುಗಾಡುವುದು ಒಂದೇ, ಸಂವೇದನೆಯಿಲ್ಲದ ಬಂಡೆಗಲ್ಲಿನೊಂದಿಗೆ ತಿರುಗಾಡುವುದು ಒಂದೇ ಅನಿಸಿತು ನನಗಾಗ. ತಾನು ಹೋದತ್ತಲೆ ನನ್ನನ್ನೂ ಬರಬರ ಎಳೆದೊಯ್ಯುತ್ತಿದ್ದ. ನಾನು ಎಷ್ಟೆ ಹಟ ಮಾಡಿದರೂ ಆತ ಕಿವಿಯಲ್ಲಿ ಹಾಕಿಕೊಳ್ಳಲಿಲ್ಲ. ನಾನು ಅತ್ತರೂ ಅವನ ಮನ ಕರಗಲಿಲ್ಲ.

ಯತ್ನಿಸತೊಡಗಿದಳು. ಇದೇ ಸರಿಯಾದ ಸಮಯವೆಂದು ನಾನು ಕೇಳಿದೆ:

‘‘ಮಮ್ಮಿ, ನಿನಗೂ ಗೊತ್ತೈತಿ. ನಾವು ಸ್ವಲ್ಪ ದಿನಗಳ ಹಿಂದುಗಡೆ ನಾನು, ನೀನು ಮತ್ತು ನಿನ್ನ ಫ್ರೆಂಡ್ಸ್ ಎಲ್ಲರೂ ಸೇರಿ ದೇವರ ಹತ್ತಿರ ಪ್ರಾರ್ಥನೆ ಮಾಡಿ ಅಪ್ಪನನ್ನ ಸೈನ್ಯದಿಂದ ಸುರಕ್ಷಿತವಾಗಿ ವಾಪಸ್ ಕರೆಸಿಕೊಂಡಿವಿ. ನನಗೀಗ ಏನು ಅನಿಸ್ತದೆ ಅಂದ್ರ ನಾ ಮೊದಲಿನಗಿಂತ ಕಠಿಣ ಪ್ರಾರ್ಥನೆ ಮಾಡಿ, ವರ ಪಡಕೊಂಡು ‘ದೇವರೆ, ಪಪ್ಪಾನ ಮೊದಲಿನಂಗ ಮಿಲಿಟರಿಗೆ ಕಳಿಸು, ಆತ ಮನ್ಯಾಗ ಇರೋದು ಬ್ಯಾಡ ಅಂತ ಕೇಳಿಕೊಂಡ್ರ ದೇವರು ಕೇಳಂಗಿಲ್ಲೇನು?’’

“ಮಗು, ನಿನ್ನ ಕೋರಿಕೆಯನ್ನ ದೇವರು ಈಡೇರಿಸಲಿಕ್ಕೆ ಸಾಧ್ಯಾನೇ ಇಲ್ಲ...”

‘‘ಯಾಕ ಮಮ್ಮಿ, ಹಂಗ್ಯಾಕ ಹೇಳ್ತಿ? ಮೊದಲು ದೇವರು ನಮ್ಮ ಪ್ರಾರ್ಥನೆಯನ್ನು ಕೇಳತಿದ್ದ. ಈಗ್ಯಾಕ ಕೇಳಂಗಿಲ್ಲ?’’

“ಯಾಕಂದ್ರ ಈಗ ಯುದ್ಧ ನಡೀತಾ ಇಲ್ಲ. ಯುದ್ಧ ನಡೆದರೆ ಮಾತ್ರ ಪಪ್ಪ ಮಿಲಿಟರಿಯೊಳಗ ಹೋಗ್ತಾನ. ಆವಾಗ ಮಾತ್ರ ಅಂವಗ ಅಲ್ಲಿ ಕೆಲಸ ಇರತದ.”

‘‘ಹೂಂ. ಹೀಂಗ ಮಾಡೋಣು. ಇನ್ನೊಂದು ಯುದ್ಧ ಸುರು ಮಾಡು ಅಂತ ದೇವರಿಗೆ ಕೇಳಿದರಾಯಿತು.’’

“ಯುದ್ಧವನ್ನ ಸುರು ಮಾಡೋನು ದೇವರು ಅಲ್ಲ. ಯಾವಾಗಲೂ ಯುದ್ಧ ಅನ್ನೋದು ಕೆಟ್ಟ ಜನರಿಂದಲೇ ಆರಂಭ ಆಗ್ತದ.”

ಓಹ್! ನಾನು ಸುಮ್ಮನಾಗಬೇಕಾಯಿತು. ದೇವರು ನನಗೆ ಇಲ್ಲಿಯೂ ಮೋಸ ಮಾಡಿದ.

ನನ್ನ ಜೀವನದಲ್ಲಿ ಒಮ್ಮೆಲೆ ಉಂಟಾದ ಈ ವಿಪತ್ತಿನ ಕಾಲವನ್ನು ಹೇಗೆ ಸಂಭಾಳಿಸಬೇಕೆಂದು ತಿಳಿಯದೆ ನಾನು ಒದ್ದಾಡತೊಡಗಿದೆ. ರಾತ್ರಿಯೆಲ್ಲ ನಿದ್ದೆ ಬರದೆ ಪರಿತಪಿಸಿದೆ. ಆವತ್ತು ಮುಂಜಾನೆ ಹಕ್ಕಿಗಳ ಚಿಲಿಪಿಲಿ ಕೇಳುತ್ತಲೆ ಎದ್ದೆ. ಸೂರ್ಯ ಇನ್ನೂ ಎದ್ದಿರಲಿಲ್ಲ. ಅಷ್ಟೊತ್ತಿಗೆ ಎದ್ದು ಅವ್ವನ ಹಾಸಿಗೆಯಲ್ಲಿ ಅಡ್ಡಾಗುವುದು ನನ್ನ ರೂಢಿಯಿತ್ತು. ನಾನು ಸೀದಾ ಅವ್ವನ ಕೋಣೆಗೆ ಹೋದೆ. ಅಲ್ಲಿ ಹೋಗಿ ನೋಡಿದರೆ ಅವ್ವನ ಪಕ್ಕ ಅಪ್ಪ ಮಲಗಿದ್ದಾನೆ. ನನಗೆ ಜಾಗವೆ ಇಲ್ಲ! ನಾನು ಅವರಿಬ್ಬರ ನಡುವೆ ನುಸುಳಿದೆ. ಅಲ್ಲಿ ಹೇಗೋ ಜಾಗ ಮಾಡಿಕೊಳ್ಳಬೇಕಿತ್ತು. ಅದಕ್ಕಾಗಿ ಅಪ್ಪನನ್ನು ನನ್ನ ಕೈಕಾಲುಗಳಿಂದ ಅತ್ತಿತ್ತ ಸರಿಸಿದೆ. ಮೊಣಕಾಲಿನಿಂದ ಗುದ್ದಿದೆ. ಹಿಂದೆ ಸರಿದು, ಮುಂದೆ ಸರಿದು, ಅಡ್ಡ ಸರಿದು ಅವನಿಗೆ ಅಡಚಣೆ ಉಂಟು ಮಾಡಿದೆ. ಅವನು ನಿದ್ದೆಗಣ್ಣಿನಲ್ಲಿಯೆ ಗೊಣಗುತ್ತಿದ್ದ. ಅಷ್ಟೊತ್ತಿಗೆ ಮಮ್ಮಿಗೆ ಎಚ್ಚರವಾಯಿತೆಂದು ಕಾಣುತ್ತದೆ. ನಾನು ನನ್ನ ಬಾಯಲ್ಲಿ ಬೆರಳಿಟ್ಟುಕೊಂಡು ಮತ್ತಷ್ಟು ಅವಳ ಹತ್ತಿರ ಸರಿದೆ. ಆಕೆ ಎಚ್ಚರವಾಗಿದ್ದು ತಿಳಿದು ನನಗೆ ಸಂತೋಷವಾಯಿತು. ಏಕೆಂದರೆ ಇಂತಹ ಚುಮುಚುಮು ನಸುಕಿನಲ್ಲಿಯೇ ನಾನು ಅವಳಿಗೆ ಆವತ್ತಿನ ನನ್ನ ಯೋಜನೆಗಳನ್ನೆಲ್ಲ ಹೇಳುತ್ತಿದ್ದೆ. ಅಂತೂ ಮಮ್ಮಿ ಇವತ್ತಾದರೂ ಸಿಕ್ಕಳಲ್ಲ!

‘‘ಮಮ್ಮಿ, ಕೇಳಿಲ್ಲಿ, ಇವತ್ತು ನಾವಿಬ್ಬರೂ ಸೇರಿ ಪ್ಯಾಟಿಗೆ ಹೋಗೋಣು. ಅಲ್ಲಿ...’’

“ಏಯ್ ಲ್ಯಾರಿ, ಮಾತಾಡಬ್ಯಾಡ. ಪಾಪ ಡ್ಯಾಡಿ ಮಲಕ್ಕೊಂಡಾರು. ಅವರಿಗೆ ಎಚ್ಚರ ಆದೀತು.”